C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 102/2022

**ಚಾ.ಸಾ.–08 ಪ್ರಾ.ಸಾ.–09**

| | |
|---|---|
| **ಸಾಕ್ಷಿದಾರರ ಹೆಸರು** | **ಮಂಜು** |
| **ತಂದೆಯ ಹೆಸರು** | **ಮರಿನಾಯಕ** |
| **ವಯಸ್ಸು** | **33 ವರ್ಷಗಳು** |
| **ಉದ್ಯೋಗ** | **ಎಲೆಕ್ಟ್ರಿಕ್ ಕೆಲಸ** |
| **ವಾಸ** | **ದೇವೇಗೌಡನಕೊಪ್ಪಲು ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 04.04.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1 ರಿಂದ 6 ರವರ ಪರಿಚಯ ನನಗೆ ಇದೆ. ಅವರು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 7, 9, 10 ರವರ ಪರಿಚಯ ನನಗೆ ಇದೆ.

2. ಈ ದಿನ ನ್ಯಾಯಾಲಯದ ಮುಂದಿರುವ 1ನೇ ಆರೋಪಿಯ ಪರಿಚಯ ನನಗೆ ಇದೆ. (Witness identified accused No. 1 in the dock). 2 ರಿಂದ 5ನೇ ಆರೋಪಿತರ ಪರಿಚಯ ಕೂಡ ನನಗೆ ಇದೆ. (learned Counsel for Accused No., 2, 3, 4 and 5 submits that there is no identity dispute with respect to accused No. 2, 3, 4 and 5). ಅವರು ನಮ್ಮ ಗ್ರಾಮದವರು.

3. ಆರೋಪಿತರು ಮತ್ತು ಚಾಸಾ- 1 ರಿಂದ 6 ರವರ ಮಧ್ಯೆ ಯಾವುದೇ ಗಲಾಟೆ ನಡೆದಿರುವುದನ್ನು ನಾನು ನೋಡಿರುವುದಿಲ್ಲ. ಅವರಿಗೆ ಆರೋಪಿತರು ಜಾತಿ ನಿಂದನೆ

ಮಾಡಿ ಹಲ್ಲೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಎಂಒ–1 ರಿಂದ 5 ವಸ್ತುಗಳನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಸದರಿ ವಸ್ತುಗಳು ಪೋಲೀಸರ ವಶಕ್ಕೆ ಹೇಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವಸ್ತುಗಳಿಗೂ ಈ ಪ್ರಕರಣಕ್ಕೂ ಏನು ಸಂಬಂದ ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ಮತ್ತು ಚಾಸಾ- 1 ರಿಂದ 6 ರವರ ಮದ್ಯೆ ಗಲಾಟೆ ನಡೆದಿರುವುದನ್ನು ನೋಡಿರುತ್ತೇನೆ ಎಂದು ಪೋಲೀಸರ ಮುಂದೆ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ</u>**

**4.** ದಿಃ25.02.2022 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ25.01.2022 ರಂದು 2ನೇ ಆರೋಪಿ ಕಟ್ಟುತ್ತಿದ್ದ ಮನೆಗೆ ಕಾಂಕ್ರಿಟ್ ಕೆಲಸಕ್ಕಾಗಿ ಚಾಸಾ- 1 ರಿಂದ 6 ಮತ್ತು ಇತರರು ಬಂದಿದ್ದು ನಾನು ಅಲ್ಲಿ ಚಾಸಾ- 7 ರವರ ಜೊತೆ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ದಿನ ಸಂಜೆ 5.00 ಗಂಟೆಗೆ ಕೆಲಸ ಮುಗಿದ ನಂತರ ಹಣದ ವಿಚಾರದಲ್ಲಿ ಆರೋಪಿತರು ಚಾಸಾ- 1 ರಿಂದ 6 ಜೊತೆಗೆ ಜಗಳ ಮಾಡಿದ್ದಲ್ಲದೆ ಅವರನ್ನು ಮಾದಿಗನನ್ನ ಮಕ್ಕಳ, ಬಡ್ಡಿ ಮಕ್ಕಳಾ, ಸೂಳೆ ಮಕ್ಕಳ ಎಂದು ಬೈದರು ಎಂದರೆ ಸರಿಯಲ್ಲ. ನಂತರ ಆರೋಪಿತರು ನಿಮ್ಮ ಜಾತಿಗೆ ಬೆಂಕಿ ಹಾಕ ಎಂದು ಕಲ್ಲು ಎತ್ತಿಹಾಕಿ ಅವರನ್ನು ಸಾಯಿಸುತ್ತೇನೆ ಎಂದು ಬಂದರು ಎಂದರೆ ಸರಿಯಲ್ಲ. ನಂತರ ನ್ಯಾಯಾಲಯದ ಮುಂದಿರುವ ಎಂಒ–1 ರಿಂದ 3 ದೊಣ್ಣೆ ಮತುತ ಕಬ್ಬಿಣದ ರಾಡಿನಿಂದ ಅವರ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಎಂಒ–4 ಸೈಜುಗಲ್ಲನ್ನು ಎತ್ತಿ ಹಾಕಿ ಸಾಯಿಸುತ್ತೇವೆಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಘಟನೆಯನ್ನು ಚಾಸಾ- 1 ರವರು ವೀಡಿಯೋ ಮಾಡುತ್ತಿದ್ದಾಗ ನ್ಯಾಯಾಲಯದ ಮುಂದಿರುವ ಎಂಒ–5 ಮೋಬೈಲ್ ಫೋನನ್ನು ಆರೋಪಿತರು ಕಿತ್ತು ಜಖಂಗೊಳಿಸಿದರು ಎಂದರೆ ಸರಿಯಲ್ಲ. ನಂತರ ದೊಣ್ಣೆ ಮತ್ತು ರಾಡನ್ನು

ಆರೋಪಿತರು ಸ್ಥಳದಲ್ಲಿ ಬಿಸಾಡಿ ಓಡಿ ಹೋದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. "ದಿಃ25.01.2022 ರಂದು ................ ................ ................ ................ .............. ... ................ ಅಲ್ಲಿಂದ ಓಡಿ ಹೋದರು" ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.16** ಎಂದು ಗುರುತಿಸಲಾಯಿತು. ಗಲಾಟೆ ಸಂದರ್ಭದಲ್ಲಿ ಪ್ರಕರಣದ ಆರೋಪಿತರನ್ನು ಚಾಸಾ- 1 ರಿಂದ 6 ರವರನ್ನು ಹಾಗೂ ಎಂಒ–1 ರಿಂದ 5 ವಸ್ತುಗಳನ್ನು ಸ್ಥಳದಲ್ಲಿನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನಾನು ಅನ್ಯೋನ್ಯವಾಗಿದ್ದೇನೆ ಎಂದರೆ ಸರಿ. ಆದಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ವಿ ವಕೀಲರಿಂದ**: ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**